# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2535
2. ಸದಸ್ಯರ ಹೆಸರು : ಶ್ರೀ ಎನ್. ರವಿಕುಮಾರ್
3. ಉತ್ತರಿಸಬೇಕಾದ ದಿನಾಂಕ : 24-03-2022

| ಕ್ರ ಸಂ | ಪ್ರಶ್ನೆಗಳು | ಉತ್ತರಗಳು |
| --- | --- | --- |
| ಅ | ಮೇಕೆದಾಟು ಅಣೆಕಟ್ಟು ಯೋಜನೆಯನ್ನು ಯಾವಾಗ ಪ್ರಾರಂಭಿಸಲಾಯಿತು. ಈ ಯೋಜನೆಯ ಕುರಿತು NGT ನೀಡಿರುವ ಆದೇಶವೇನು ; (ವಿವರ ನೀಡುವುದು) | ✓ ಮೇಕೆದಾಟು ಯೋಜನೆಯ ವಿವರವಾದ ಯೋಜನಾ ವರದಿಯನ್ನು ರೂ.9000.00 ಕೋಟಿ ಮೊತ್ತಕ್ಕೆ ತಯಾರಿಸಿ, ದಿ:18.01.2019 ರಂದು ಕೇಂದ್ರ ಜಲ ಆಯೋಗ, ನವದೆಹಲಿಗೆ ಸಲ್ಲಿಸಲಾಗಿದ್ದು, ಕೇಂದ್ರ ಸರ್ಕಾರದ ಮಂತ್ರಾಲಯಗಳಿಂದ ಅನುಮೋದನೆ ನಿರೀಕ್ಷಿಸಲಾಗಿದೆ.<br><br>**ಯೋಜನೆ ಕುರಿತಂತೆ ರಾಷ್ಟ್ರೀಯ ಹಸಿರು ನ್ಯಾಯಮಂಡಳಿ (NGT) ಪ್ರಕರಣ:**<br><br>✓ ಮೇಕೆದಾಟು ಅಣೆಕಟ್ಟು ಬಳಿ ನಿರ್ಮಾಣ ಚಟುವಟಿಕೆ ತಮಿಳುನಾಡಿನಲ್ಲಿ ಅಸಮಾಧಾನವನ್ನು ಉಂಟು ಮಾಡುತ್ತಿದೆ" ಎಂಬ ಶೀರ್ಷಿಕೆಯಡಿ, ದಿನಾಂಕ: 15.04.2021 ರಂದು Times of India ದಿನ ಪತ್ರಿಕೆಯ, ಚೆನ್ನೈ ಆವೃತ್ತಿಯಲ್ಲಿ ಪ್ರಕಟವಾದ ವರದಿ ಆಧಾರದ ಮೇಲೆ ತಮಿಳುನಾಡು ಸರ್ಕಾರವು ದಿನಾಂಕ:27.04.2021 ರಂದು ಜಲಶಕ್ತಿ ಮಂತ್ರಾಲಯಕ್ಕೆ ದೂರು ಸಲ್ಲಿಸಿರುತ್ತದೆ.<br>✓ ತತ್ಸಂಬಂಧ ಮಾನ್ಯ ರಾಷ್ಟ್ರೀಯ ಹಸಿರು ನ್ಯಾಯ ಮಂಡಳಿ (ದಕ್ಷಿಣ ವಲಯ) ಚೆನ್ನೈ, ಸ್ವಯಂ ಪ್ರೇರಿತವಾಗಿ (Suo Moto) ದಿನಾಂಕ:21.05.2021 ರಂದು ನಡವಳಿಯನ್ನು ಪ್ರಾರಂಭಿಸಿ, ಜಂಟಿ ಸಮಿತಿಯೊಂದನ್ನು ರಚಿಸಿ ಸ್ಥಳ ಪರಿಶೀಲನೆ ಮಾಡಿ ವಾಸ್ತವಾಂಶವನ್ನು ವರದಿ ಮಾಡಲು ಆದೇಶಿಸಿತ್ತು.<br>✓ ಕರ್ನಾಟಕ ಸರ್ಕಾರವು ದಿನಾಂಕ:09.06.2021ರಂದು ರಾಷ್ಟ್ರೀಯ ಹಸಿರು ನ್ಯಾಯ ಮಂಡಳಿ (ದಕ್ಷಿಣ ವಲಯ) ಚೆನ್ನೈ, ಮುಂದೆ ನ್ಯಾಯಮಂಡಳಿಯ ಆದೇಶವನ್ನು ಪುನರ್ ಪರಿಶೀಲಿಸಲು ಅರ್ಜಿಯನ್ನು ಸಲ್ಲಿಸಿತು.<br>✓ ಏತನ್ಮಧ್ಯೆ ಪ್ರಕರಣವು ರಾಷ್ಟ್ರೀಯ ಹಸಿರು ನ್ಯಾಯ ಮಂಡಳಿ ಪ್ರಧಾನ ನ್ಯಾಯಪೀಠ, ನವದೆಹಲಿಗೆ ವರ್ಗಾವಣೆಯಾಯಿತು. ರಾಷ್ಟ್ರೀಯ ಹಸಿರು ನ್ಯಾಯ ಮಂಡಳಿ ಪ್ರಧಾನ ನ್ಯಾಯಪೀಠ, ನವದೆಹಲಿ ದಿನಾಂಕ:17.06.2021 ರಂದು ವಿಚಾರಣೆ ನಡೆಸಿ, ಪರಿಸರ ಅನುಮತಿ ಕೋರಿ ಕರ್ನಾಟಕ ಸಲ್ಲಿಸಿರುವ ಅರ್ಜಿಯು ಕೇಂದ್ರ ಸರ್ಕಾರದ ಎದುರು ಬಾಕಿ ಇರುವುದರಿಂದ, ಈ ಹಂತದಲ್ಲಿ ಸ್ವಯಂ ಪ್ರೇರಿತದೂರು ದಾಖಲಿಸಿ ವಿಚಾರ ನಡೆಸುವಂತಿಲ್ಲ ಎಂಬುದಾಗಿ ತೀರ್ಪನ್ನು ನೀಡಿ ರಾಷ್ಟ್ರೀಯ ಹಸಿರು ನ್ಯಾಯಮಂಡಳಿ(ಎನ್‌ಜಿಟಿ) ದಕ್ಷಿಣ (ಚೆನ್ನೈ)ದ ಪೀಠ ನೀಡಿದ ಆದೇಶವನ್ನು ರದ್ದುಪಡಿಸಿ ಈ ಕೆಳಕಂಡಂತೆ ಆದೇಶಿಸಿದೆ.<br><br>*" .... there is no need for this Tribunal to continue the suomoto proceedings."* |

| ಕ್ರ ಸಂ | ಪ್ರಶ್ನೆಗಳು | ಉತ್ತರಗಳು |
| --- | --- | --- |
| | | *"Accordingly, proceedings before this Tribunal are closed without prejudice to the rival contentions of the parties on the subject in proceedings pending before the concerned statutory authority and before the Honorable Supreme Court.*<br>✓ ಮೇಲಿನ ಪ್ರಧಾನ ಪೀಠದ ಆದೇಶವನ್ನು ಪ್ರಶ್ನಿಸಿ ತಮಿಳುನಾಡು ರಾಜ್ಯವು ದಿನಾಂಕ:11.08.2021ರಂದು ಮಾನ್ಯ ಸರ್ವೋಚ್ಚ ನ್ಯಾಯಾಲಯಕ್ಕೆ ಮೇಲ್ಮನವಿಯನ್ನು (Civil Appeal – 5608/2021) ಸಲ್ಲಿಸಿದೆ. |
| ಆ | ಈ ಯೋಜನೆಯಿಂದ ಬೆಂಗಳೂರು ನಗರಕ್ಕೆ ಎಷ್ಟು ಟಿ.ಎಂ.ಸಿ. ಕುಡಿಯುವ ನೀರಿನ ಸೌಲಭ್ಯವನ್ನು ಒದಗಿಸುವ ಯೋಜನೆ ಇದೆ; ಪ್ರಸ್ತುತ ಈ ಯೋಜನೆಯು ಯಾವ ಹಂತದಲ್ಲಿದೆ? (ವಿವರ ನೀಡುವುದು) | ಮೇಕೆದಾಟು ಯೋಜನೆಯ ವಿಸ್ತೃತ ಯೋಜನಾ ವರದಿಯಲ್ಲಿ ಬೆಂಗಳೂರು ನಗರ ಮತ್ತು ಸುತ್ತಮುತ್ತಲಿರುವ ಕಾವೇರಿ ಜಲಾನಯನದಲ್ಲಿನ ಪ್ರದೇಶಗಳ ಕುಡಿಯುವ ಹಾಗೂ ಗೃಹೋಪಯೋಗಿ ಬಳಕೆಗಾಗಿ 4.75 ಟಿ.ಎಂ.ಸಿ (consumptive use) ನೀರನ್ನು ಬಳಸಲು ಅವಕಾಶ ಕಲ್ಪಿಸಲಾಗಿದೆ.<br><br>ಮೇಕೆದಾಟು ಯೋಜನೆಯನ್ನು ಕಾರ್ಯಗತಗೊಳಿಸಲು ಈ ಕೆಳಕಂಡ ಸಕ್ಷಮ ಪ್ರಾಧಿಕಾರಗಳ ಅಗತ್ಯ ತೀರುವಳಿಯನ್ನು ನಿರೀಕ್ಷಿಸಲಾಗಿದೆ.<br>✓ ಕೇಂದ್ರ ಜಲ ಆಯೋಗದ ವಿವಿಧ ನಿರ್ದೇಶನಾಲಯಗಳಿಂದ<br>✓ Environmental Impact Assessment (EIA) & Environmental Management Plan (EMP) ವರದಿಗಳನ್ನು ತಯಾರಿಸಲು Terms of Reference (ToR) ಅರ್ಜಿಗೆ ಪರಿಸರ ಅರಣ್ಯ ಮತ್ತು ಹವಾಮಾನ ಬದಲಾವಣೆಯ ಸಚಿವಾಲಯದ (MoEF & CC) ಅನುಮೋದನೆ.<br>✓ ವನ್ಯಜೀವಿ, ಅರಣ್ಯ ಹಾಗೂ ಪರಿಸರದ ಶಾಸನಬದ್ಧ ತೀರುವಳಿಗಳು.<br><br>ಮುಂದುವರೆದು, ಸದರಿ ಯೋಜನೆಗೆ ಸಂಬಂಧಿಸಿದಂತೆ ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ (1)Miscellaneous Application No. 3127/2018, (2) Miscellaneous Application (Diary) No. 20271/2021 ಹಾಗೂ (3) Civil Application No. 5608/2021 ಪ್ರಕರಣಗಳು ಬಾಕಿ ಇರುತ್ತವೆ. |

*ಸಂಖ್ಯೆ:ಜಸಂಇ 79 ಎನ್‌ಎಲ್‌ಎ 2022*

(ಗೋವಿಂದ ಎಂ. ಕಾರಜೋಳ)
ಜಲಸಂಪನ್ಮೂಲ ಸಚಿವರು